ಅವರನ್ನು ಬಿಡಿಸಿ ಕರೆದೊಯ್ದರು. ಕ್ಷಣ ಮಾತ್ರದಲ್ಲಿ ಈ ಸುದ್ದಿ ಬಿತ್ತರವಾಗತೊಡಗಿತು.

"ಸಾರ್, ನಾವೇ ಯಾರಾದರೂ ಬಂದು ದೂರು ತೆಗೆದುಕೊಳ್ಳುತ್ತಿದ್ದೆವು. ಅಥವಾ ಹಾಗೇ ಆಫ್ ದಿ ರೆಕಾರ್ಡ್ ಕೆಲಸ ಆಗುತ್ತಿತ್ತು. ಸುಮ್ಮನೆ ಈಗ ನೋಡಿ ಮೀಡಿಯಾದವರಿಗೂ..." ಕಮಿಷನರ್ ಮಾತುಗಳನ್ನು ಅರ್ಧದಲ್ಲಿಯೇ ತಡೆಯುತ್ತಾ, "ಇದೆಲ್ಲ ಇದ್ದಿದ್ದೇ... ಇದು ನನ್ನ ಖಾಸಗಿ ದೂರು... ಹಾಗಾಗಿ ನಾನೇ ಬಂದೆ... ಇದರಿಂದ ಜನ ಕೂಡಾ ತಮಗೆ ಅನ್ಯಾಯ ಆದರೆ ಮೊದಲು ಪೊಲೀಸರ ಬಳಿ ಹೋಗಬೇಕು ಎಂಬ ಸಂದೇಶ ಕೊಟ್ಟಂತೆ ಆಗುತ್ತದೆ, ಅಲ್ಲವೇ?" ಎಂದರು ಕಾರ್ಯದರ್ಶಿ.

ಇನ್‌ಸ್ಪೆಕ್ಟರ್ ಗಂಗಾಧರ ದೂರು ಬರೆಯಲು ತಯಾರಾಗಿ, "ಸರ್ ನಿಮ್ಮ ಡ್ರೈವರ್ ಹೆಸರು..." ಎಂದು ಕೇಳಿದ.

"ಬರೀ ಡ್ರೈವರ್ ಅಲ್ಲ... ಅವನು ಮತ್ತು ಇನ್ನು ಕೆಲವು ಅನಾಮಧೇಯ ವ್ಯಕ್ತಿಗಳು ಎಂದು ಕೇಸ್ ರಿಜಿಸ್ಟರ್ ಮಾಡಿ ವಿಚಾರಣೆ ಪ್ರಾರಂಭಿಸಿ..."

''ಒಂದು ಸ್ಪೆಷಲ್ ಟೀಂ ಮಾಡಿದ್ದೇನೆ ಸರ್... ಎಸಿಪಿ ಶಿವಣ್ಣ ನೇತೃತ್ವದಲ್ಲಿ. ಬಾಕಿ ವಿಚಾರ ನನಗೆ ಬಿಡಿ. ಸೈಬರ್ ಕ್ರೈಂ ಅಡಿಯಲ್ಲಿ ಸರಿಯಾದ ಕೇಸ್ ಫಿಟ್ ಮಾಡಿ ಒಳ ಹಾಕಿಸ್ತೀನಿ..." ಕಮಿಷನರ್ ಹೇಳಿದರು.

''ಅವನು ಸಿಕ್ಕ ತಕ್ಷಣ ನನಗೆ ಮಾಹಿತಿ ಕೊಡಿ. ಅವನ ಬಳಿ ಮಾತಾಡಬೇಕು. ನಂತರ ಚಾರ್ಜ್‌ಶೀಟ್ ಮತ್ತು ಕೋರ್ಟ್‌ಗೆ ಹೋಗುವುದರ ಬಗ್ಗೆ ಹೇಳುತ್ತೇನೆ'' ಎಂದು ಗೃಹ ಕಾರ್ಯದರ್ಶಿ ಜಗದೀಶಚಂದ್ರ ಎದ್ದರು. ಆಗ ಅವರ ಮೊಬೈಲ್‌ಗೆ ಅವರ ಮನೆಯಿಂದ ಫೋನ್ ಬಂದಿತು. ಮಾಡಿದ್ದು ಅವರ ಪತ್ನಿ.

''ನಾನು ಆಗಲೇ ಹೇಳಿದೆ... ಪೊಲೀಸ್ ಕೇಸ್ ಬೇಡ ಅಂತ... ಈಗ ನೋಡಿ ಎಲ್ಲಾ ಟೀವಿಯಲ್ಲೂ ನಿಮ್ಮದೇ ಮಾತು. ಸುಮ್ಮನೆ ಹಾಗೇ ಹಿಡಿದು ಹಾಕಿ ಬುದ್ಧಿ ಹೇಳಿದ್ರೆ ಆಗುತ್ತಿರಲಿಲ್ಲವಾ...'' ಅವರ ಧ್ವನಿ ಎಷ್ಟಿತ್ತೆಂದರೆ... ಅಲ್ಲಿದ್ದವರಿಗೂ ಕೇಳುತ್ತಿತ್ತು. ಅದನ್ನರಿತ ಜಗದೀಶಚಂದ್ರ ಕಮೀಷನರ್‌ಗೆ, ''ಸ್ವಲ್ಪ ಗಮನಿಸಿಕೊಳ್ಳಿ... ಮನೆಯವರೂ ಬೇಜಾರಾಗಿದ್ದಾರೆ...'' ಎಂದು ಹೊರಟರು.

ಸೆಲ್ಯೂಟ್ ಮಾಡಿದ ಗಂಗಾಧರ ಮತ್ತು ಎಸಿಪಿ ಶಿವಣ್ಣ ಅವರ ಕಡೆ ತಿರುಗಿ, ''ರಿಸಲ್ಟ್ ಬೇಗ ಬೇಕು ಹಾಗೂ ಕಾನ್ಫಿಡೆನ್ಷಿಯಲ್ ಆಗಿರಬೇಕು... ಹಾಂ, ಅದೇನೋ ಅಶ್ಲೀಲ ಸಿಡಿ ಅನ್ನುತ್ತಿದ್ದಾರೆ ಈ ಪತ್ರಕರ್ತರು, ಅದನ್ನೂ ಸ್ವಲ್ಪ ಗಮನಿಸಿ'' ಎಂದು ಹೊರಟರು.

ಅಲ್ಲಿದ್ದ ಪೊಲೀಸರಿಗೆ ಸ್ವಲ್ಪ ನಿರಾಳ ಹಾಗೂ ಆತಂಕ. ಗೃಹ ಕಾರ್ಯದರ್ಶಿ ಹೊರಟರೆಂಬ ನಿರಾಳ ಮತ್ತು ಹೊರಗಿನ ಪತ್ರಕರ್ತರನ್ನು ಸಂಭಾಳಿಸುವುದು ಹೇಗೆ ಎಂಬ ಆತಂಕ.

ಜಗದೀಶಚಂದ್ರ ಪೊಲೀಸ್ ಸ್ಟೇಶನ್‌ನಿಂದ ಹೊರಬರುತ್ತಿದ್ದಂತೆಯೇ ಪತ್ರಕರ್ತರೆಲ್ಲ ಅವರನ್ನು ಮುತ್ತಿಕೊಂಡರು.

"ಸರ್ ಈ ಕಂಪ್ಲೇಂಟ್... ನಿಮ್ಮ ಡ್ರೈವರ್ ನಿಮ್ಮ ಅಶ್ಲೀಲ ಸಿಡಿ ಮಾಡಿದ್ದಾನಂತೆ ಹೌದಾ... ನಿಮ್ಮನ್ನು ಹೆದರಿಸುತ್ತಿದ್ದಾನಂತೆ ಹೌದಾ... ಅದಕ್ಕಾಗಿ ಈ ಕಂಪ್ಲೇಂಟ್ ಕೊಡುವುದಕ್ಕೆ ಬಂದಿದ್ದಾ?..."

ಸಂದಿಗ್ಧ ಪರಿಸ್ಥಿತಿ! ಹೌದು ಎಂದರೆ, ಸಿಡಿ ಇದೆ ಎಂದು ಅರ್ಥ. ಇಲ್ಲ ಎಂದರೆ, ಒಬ್ಬ ಮನೆ ಕೆಲಸದವನ ವಿರುದ್ಧ ದೂರು ಕೊಡಲು ಇಲ್ಲೇಕೆ ಬಂದಿರಿ? ಎಂಬ ಪ್ರಶ್ನೆ... ಇಕ್ಕಟ್ಟಿನಲ್ಲಿ